

بسم اللهِ الرّحمٰن الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್,** ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **14-08-2020** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ۔

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ۔ بِسْمِ اللهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

(ತಶಹ್ಹುದ್, ತಅವ್ವುಝ್ ಮತ್ತು ಸೂರತುಲ್ ಫಾತಿಹ ತಿಲಾವತ್ ಮಾಡಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ *ಹೀಗೆ ಹೇಳಿದರು:*

ಎರಡು ಜುಮುಅಗೆ ಮುಂಚೆ ಸಹಾಬಿವರ್ಯರಲ್ಲಿ ಹಝ್ರತ್ ಸಅದ್ ಬಿನ್ ಅಬೀ ವಖಾಸ್ ರಝಿಯಲ್ಲಾಹು ಅನ್‌ಹುರ ಬಗ್ಗೆ ಪ್ರಸ್ತಾಪಿಸುತ್ತಿದ್ದೆನು. ಅವರ ಬಗ್ಗೆ ಇನ್ನೂ ಹೆಚ್ಚಿನ ಕೆಲವು ಸಂಗತಿಗಳಿವೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಹಝ್ರತ್ ಸಅದ್ ಬಿನ್ ಅಬೀ ವಖಾಸ್(ರ) ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಿಶಿಷ್ಟ ಸಹಾಬಿಗಳಲ್ಲಿ ಒಬ್ಬರಾಗಿದ್ದರು. ಹಝ್ರತ್ ಉಮರ್(ರ)ರವರು ತಮ್ಮ ಖಿಲಾಫತ್ ಕಾಲದಲ್ಲಿ ಇರಾನ್ ಸೈನ್ಯದ ಎದುರಾಗಿ ಇಸ್ಲಾಮಿನ ಸೈನ್ಯದ ಸೇನಾ ನಾಯಕತ್ವವನ್ನು ಹಝ್ರತ್ ಸಅದ್(ರ)ರಿಗೆ ನೀಡಿದ್ದರು. ಅನಿರೀಕ್ಷಿತವಾಗಿ ಅವರ ತೊಡೆಯಲ್ಲಿ ಒಂದು ಕುರು ಉಂಟಾಯಿತು. ಅದು ದೀರ್ಘಕಾಲದ ವರೆಗೂ ವಾಸಿಯಾಗಲಿಲ್ಲ. ತುಂಬಾಚಿಕಿತ್ಸೆ ನಡೆಸಲಾಗಿತ್ತಾದರೂ ಯಾವುದೇ ಪ್ರಯೋಜನವುಂಟಾಗಲಿಲ್ಲ. ನಾನು ಮಂಚದಲ್ಲಿ ಹೀಗೆ ಇದ್ದು ಬಿಟ್ಟಿರುವುದನ್ನು ಸೈನ್ಯ ನೋಡುವುದಾದರೆ, ಅವರೊಂದಿಗೆ ಸೇನಾಧಿಪತಿಯಿಲ್ಲದ ಕಾರಣ ಸೈನ್ಯ ಧೈರ್ಯಗುಂದುವುದು ಎಂದು ಹಝ್ರತ್ ಸಅದ್(ರ) ಯೋಚಿಸಿದರು. ಅವರು ಒಂದು ಮರದ ಮೇಲೆ ಒಂದು ಅಟ್ಟಣಿಗೆಯನ್ನು ತಯಾರಿಸಿದರು. ಮುಸ್ಲಿಮ್ ಸೇನೆ ಅವರನ್ನು ನೋಡುವಂತಾಗಲು ಈ ಅಟ್ಟಣಿಗೆಯ ಮೇಲೆ ಜನರ ಸಹಾಯದಿಂದ ಕುಳಿತು ಕೊಳ್ಳುತ್ತಿದ್ದರು. ಸೇನಾಧಿಪತಿ ತಮ್ಮೊಂದಿಗೆ ಇರುವರು ಎಂಬ ಧೈರ್ಯವನ್ನು ಮೂಡಿಸಲು ಇದು ಸಹಾಯಕವಾಗಿತ್ತು. ಆ ದಿನಗಳಲ್ಲಿ ಒಬ್ಬ ಅರಬ್ ಸರದಾರ ಶರಾಬು ಕುಡಿದರು ಎಂಬ ವಾರ್ತೆ ಅವರಿಗೆ ಲಭಿಸಿತು. ಹೀಗೆ ಆ ಸರದಾರನನ್ನು ಬಂಧಿಸಲಾಯಿತು. ನಿಸ್ಸಂಶಯವಾಗಿಯೂ ಆ ವ್ಯಕ್ತಿಯಲ್ಲಿ ದೌರ್ಬಲ್ಯವಿದ್ದ ಕಾರಣ ಅವರು ಶರಾಬು ಕುಡಿದಿದ್ದರು. ಆದರೆ ಅವರು ಶೂರರಾಗಿದ್ದರು. ಅವರೊಳಗೆ ಆವೇಶವಿತ್ತು. ಯುದ್ಧದಲ್ಲಿ ಮುಸ್ಲಿಮರಿಗೆ ಉಂಟಾದ ನಷ್ಟದ ಬಗ್ಗೆ ಕೇಳಿ ಕೊಠಡಿಯಲ್ಲಿ ಒಂದು ಸಿಂಹದ ಹಾಗೆ ಆಚೆ ಈಚೆ ನಡೆಯುತ್ತಿದ್ದರು. ನಡೆಯುತ್ತಾ ಒಂದು ಪದ್ಯವನ್ನು ಹೇಳುತ್ತಿದ್ದರು. ಅದರ ಅರ್ಥ ಇದಾಗಿತ್ತು: "ಇಸ್ಲಾಮನ್ನು ಸಂರಕ್ಷಿಸಿ ನಿನ್ನ ಶೌರ್ಯದಿಂದ ಕೂಡಿದ ಕೌಶಲ್ಯವನ್ನು ತೋರಿಸಲು ನಿನಗೆ ಇಂದೇ ಒಂದು ಸಂದರ್ಭವಾಗಿತ್ತು, ಆದರೆ ನೀನು ಸೆರೆಯಲ್ಲಿರುವೆ."

ಹಝ್ರತ್ ಸಅದ್‌ರ(ರ) ಪತ್ನಿ ತುಂಬ ಧೈರ್ಯವಂತ ಸ್ತ್ರೀಯಾಗಿದ್ದರು. ಅವರು ಈ ಪದ್ಯವನ್ನು ಕೇಳಿದಾಗ ಆ ಕೈದಿಯನ್ನು ಸಂಬೋಧಿಸಿ ಹೇಳಿದರು: ನಿನ್ನನ್ನು ಸಅದ್ ಬಂಧಿಸಿರುವರು ಎಂದು ನಿನಗೆ ಗೊತ್ತಿದೆಯಲ್ಲವೇ? ನಾನು ನಿನ್ನನ್ನು ಬಂಧನದಿಂದ ವಿಮುಕ್ತಗೊಳಿಸಿದ್ದೇನೆ ಎಂದು ಅವರು ತಿಳಿದರೆ, ನನ್ನನ್ನು ಸುಮ್ಮನೆ ಬಿಡಲಿಕ್ಕಿಲ್ಲ. ಆದರೆ ನೀನು ನಿನ್ನ ಅಭಿಲಾಷೆಯ ಪ್ರಕಾರ ಇಸ್ಲಾಮಿಗೆ ನೆರವಾಗುವಂತಾಗಲು ನಿನ್ನನ್ನು ಬಂಧನದಿಂದ ಬಿಡುಗಡೆಗೊಳಿಸಬೇಕೆಂದು ನನ್ನ ಮನಸ್ಸು ಹೇಳುತ್ತಿದೆ. ಅವರು ಹೇಳಿದರು: ಈ ಯುದ್ಧಕ್ಕಾಗಿ ನನ್ನನ್ನು ಬಿಡಿರಿ, ಯುದ್ಧ ಮುಗಿದ ಕೂಡಲೆ ನಾನು ವಾಪಾಸ್ಸು ಬಂದು ಈ ಕೊಠಡಿಯಲ್ಲಿ ಪ್ರವೇಶಿಸುವೆನು. ಆ ಸ್ತ್ರೀಯ ಹೃದಯದಲ್ಲಿಯೂ ಇಸ್ಲಾಮಿನ ಬಗ್ಗೆ ಕಾಳಜಿಯಿತ್ತು. ಅದರ ಸಂರಕ್ಷಣೆಗಾಗಿ ಆವೇಶವಿತ್ತು. ಆದ್ದರಿಂದ ಅವರು ಆತನನ್ನು ಬಂಧನದಿಂದ ವಿಮುಕ್ತಿ ಮಾಡಿದರು. ಆ ವ್ಯಕ್ತಿ ಯುದ್ಧದಲ್ಲಿ ಭಾಗವಹಿಸಿ ಎಷ್ಟು ಸಾಹಸದಿಂದ ಹೋರಾಡಿದರೆಂದರೆ, ಅವರ ಶೌರ್ಯದ ಕಾರಣ ಇಸ್ಲಾಮಿನ ಸೈನ್ಯ ಹಿಮ್ಮೆಟ್ಟುವುದಕ್ಕೆ ಬದಲಾಗಿ ಮುಂದಕ್ಕೆ ಸಾಗಿತ್ತು. ಹಝ್ರತ್ ಸಅದ್(ರ) ಅವರನ್ನು ಗುರುತಿಸಿದರು. ಅನಂತರ ಹೇಳಿದರು: ಶರಾಬು ಕುಡಿದಿದ್ದ ಕಾರಣ ನಾನು ಬಂಧಿಸಿದ್ದ ವ್ಯಕ್ತಿ ಇಂದಿನ ಯುದ್ಧದಲ್ಲಿ ಇದ್ದನು. ಅವನು ಮುಖವಾಡ ಹಾಕಿದ್ದರೂ, ನನಗೆ ಅವನ ಹಲ್ಲೆಯ ವಿಧಾನ ಮತ್ತು ಮೈಕಟ್ಟಿನ ಪರಿಚಯವಿದೆ. ಅವನನ್ನು ಬಂಧನದಿಂದ ವಿಮುಕ್ತಗೊಳಿಸಿದ ವ್ಯಕ್ತಿಯನ್ನು ಕಂಡುಹಿಡಿದು ಅವನಿಗೆ ಕಠಿಣ ಶಿಕ್ಷೆಯನ್ನು ನೀಡುವೆನು. ಹಝ್ರತ್ ಸಅದ್(ರ) ಈ ಮಾತುಗಳನ್ನಾಡಿದಾಗ ಅವರ ಪತ್ನಿಗೆ ಕೋಪಬಂದು ಹೀಗೆ ಹೇಳಿದರು: ನಿಮಗೆ ನಾಚಿಕೆಯಾಗುವುದಿಲ್ಲವೇ? ನೀವು ಮರದಲ್ಲಿ ಅಟ್ಟಣಿಗೆ ಹಾಕಿ ಕುಳಿತುಕೊಂಡು ಆ ವ್ಯಕ್ತಿಯನ್ನು ಕೈದಿ ಮಾಡಿದ್ದೀರಿ. ಅವನಾದರೋ ಯಾವುದೇ ಹಿಂಜರಿಕೆಯಿಲ್ಲದೆ ಜೀವದ ಹಂಗು ತೊರೆದು ಶತ್ರುಗಳ ಸೈನ್ಯದೊಳಗೆ ನುಗ್ಗುತ್ತಾನೆ. ನಾನೇ ಅವನನ್ನು ಬಂಧನದಿಂದ ವಿಮುಕ್ತಗೊಳಿಸಿದ್ದು. ನೀವು ಏನು ಬೇಕಾದರೂ ಮಾಡಿರಿ.

ಈ ಘಟನೆಯನ್ನು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಲಜ್‌ನಾಗೆ ನೀಡಿದ ಒಂದು ಭಾಷಣದಲ್ಲಿ ಹೇಳಿದ್ದರು. ಸ್ತ್ರೀಯರು ಇಸ್ಲಾಮಿನಲ್ಲಿ ಬಹಳ ಶ್ರೇಷ್ಠ ಕೆಲಸಗಳನ್ನು ಮಾಡಿರುವರು. ಇಂದೂ ಅಹ್ಮದೀ ಸ್ತ್ರೀಯರು ಈ ಉದಾಹರಣೆಗಳನ್ನು ತಮ್ಮ ಮುಂದಿರಿಸಬೇಕೆಂದು ಅವರು ಹೇಳಿದ್ದರು.

ಖಾದಿಸಿಯದ ಮೇಲೆ ವಿಜಯ ಸಾಧಿಸಿದ ಬಳಿಕ ಇಸ್ಲಾಮಿನ ಸೈನ್ಯ ಬಾಬುಲಿನ ಮೇಲೆ ವಿಜಯ ಸಾಧಿಸಿತು. ಅನಂತರ ಅದೇ ಯುದ್ಧದಲ್ಲಿ ಮದಾಇನ್ ಮೇಲೆ ಸಹ ವಿಜಯ ಸಾಧಿಸಲಾಯಿತು. ಹೀಗೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಹ್‌ಝಾಬ್ ಯುದ್ಧದ ವೇಳೆ ಮಾಡಿದ ಭವಿಷ್ಯವಾಣಿ ಪೂರ್ತಿಯಾಯಿತು.

ಅನಂತರ ಹಝ್ರತ್ ಸಅದ್(ರ) ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರಿಗೆ ಪತ್ರ ಬರೆದು ಇನ್ನೂ ಮುಂದಕ್ಕೆ ಹೋಗಲು ಅನುಮತಿ ಕೇಳಿದರು. ಸದ್ಯಕ್ಕೆ ಇಷ್ಟು ಸಾಕೆಂದೂ ಹಾಗೂ ವಶಪಡಿಸಿದ ಪ್ರದೇಶಗಳ ಆಡಳಿತ ವ್ಯವಸ್ಥೆಯ ಕಡೆಗೆ ಗಮನ ಹರಿಸಬೇಕೆಂದೂ ಹಝ್ರತ್ ಉಮರ್(ರ) ಹೇಳಿದರು. ಹಾಗೆ ಹಝ್ರತ್ ಸಅದ್(ರ) ಮದಾಇನನ್ನು ಕೇಂದ್ರೀಕರಿಸಿ ಆಡಳಿತ ವ್ಯವಸ್ಥೆಯನ್ನು ಸುದೃಢಗೊಳಿಸಲು ಪ್ರಯತ್ನಿಸಿ ಅದನ್ನು ಬಹಳ ಚೆನ್ನಾಗಿ ನೆರವೇರಿಸಿದರು. ಪ್ರಜೆಗಳಿಗಾಗಿ ಕ್ಷೇಮ ಮತ್ತು ನೆಮ್ಮದಿಯ ವ್ಯವಸ್ಥೆ ಮಾಡಿದರು. ಹೀಗೆ ಅಲ್ಲಾಹನು ಅವರನ್ನು ಯುದ್ಧದ ಸಾಮರ್ಥ್ಯದೊಂದಿಗೆ ಆಡಳಿತ ಸಾಮರ್ಥ್ಯದಿಂದಲೂ ಅನುಗ್ರಹಿಸಿರುವನು ಎಂದು ತಮ್ಮ ರಾಜ ನೀತಿ ಮತ್ತು ಉತ್ತಮ ಕೆಲಸಗಳಿಂದ ಸಾಬೀತುಪಡಿಸಿದರು. ಮದಾಇನಿನ ಹವಾಮಾನ ಅರಬರ ಪ್ರಕೃತಿಗೆ ಅನುಕೂಲಕರವಾಗಿರಲಿಲ್ಲ. ಆದ್ದರಿಂದ ಹಝ್ರತ್ ಸಅದ್(ರ) ಹಝ್ರತ್ ಉಮರ್(ರ)ರ ಅನುಮತಿ ಪಡೆದು ಒಂದು ಹೊಸ ನಗರವನ್ನು ನಿರ್ಮಿಸಿದರು. ಅದರಲ್ಲಿ ವಿವಿಧ ಅರಬ್ ಗೋತ್ರದವರನ್ನು ಬೇರೆ ಬೇರೆ ಮೊಹಲ್ಲಾಗಳಲ್ಲಿ ನೆಲೆಸುವಂತೆ ಮಾಡಿದರು. ಪಟ್ಟಣದ ಮಧ್ಯೆ ಒಂದು ದೊಡ್ಡ ಮಸೀದಿಯನ್ನು ನಿರ್ಮಿಸಿದರು. ಅದರಲ್ಲಿ ನಲ್ವತ್ತು ಸಾವಿರ ಜನರು ಒಟ್ಟಿಗೆ ನಮಾಝ್ ಮಾಡಬಹುದಾಗಿತ್ತು.

ಹಿಜರೀ 23ರಲ್ಲಿ ಹಝ್ರತ್ ಉಮರ್‌ರ(ರ) ಮೇಲೆ ಮಾರಣಾಂತಿಕ ಹಲ್ಲೆ ನಡೆದಾಗ ಖಿಲಾಫತಿಗಾಗಿ ಯಾರದಾದರೂ ಹೆಸರನ್ನು ಸೂಚಿಸಲು ಜನರು ಅವರಲ್ಲಿ ಕೋರಿದರು. ಆಗ ಹಝ್ರತ್ ಉಮರ್(ರ) ಖಿಲಾಫತ್ ಚುನಾವಣೆಗಾಗಿ ಒಂದು ಚುನಾವಣಾ ಮಂಡಳಿಯನ್ನು ನಿಶ್ಚಯಿಸಿದರು. ಅದರಲ್ಲಿ ಹಝ್ರತ್ ಉಸ್ಮಾನ್, ಹಝ್ರತ್ ಅಲಿ, ಹಝ್ರತ್ ಅಬ್ದುರಹ್ಮಾನ್ ಬಿನ್ ಔಫ್, ಹಝ್ರತ್ ಸಅದ್ ಬಿನ್ ಅಬೀ ವಖಾಸ್, ಹಝ್ರತ್ ಝುಬೈರ್ ಬಿನ್ ಅವಾಮ್ ಮತ್ತು ಹಝ್ರತ್ ತಲ್‌ಹ ಬಿನ್ ಉಬೈದುಲ್ಲಾಹ್ ಇದ್ದರು. ಹಝ್ರತ್ ಉಮರ್(ರ) ಹೇಳಿದರು: ಇವರಲ್ಲಿ ಯಾರನ್ನಾದರೂ ಆಯ್ಕೆ ಮಾಡಿರಿ. ಏಕೆಂದರೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರನ್ನು ಸ್ವರ್ಗವಾಸಿಗಳು ಎಂದು ಹೇಳಿರುವರು. ಖಿಲಾಫತ್ ಸಅದ್ ಬಿನ್ ಅಬೀ ವಖಾಸರಿಗೆ ಲಭಿಸಿದರೆ, ಅವರೇ ಖಲೀಫರಾಗಲಿ. ಅನ್ಯಥಾ ನಿಮ್ಮಲ್ಲಿ ಯಾರೇ ಖಲೀಫರಾಗಲಿ, ಅವರು ಸಅದ್‌ರಿಂದ ನೆರವು ಪಡೆಯುತ್ತಿರಲಿ.

ಹಝ್ರತ್ ಉಸ್ಮಾನ್‌ರ(ರ) ಖಿಲಾಫತ್ ಕಾಲದಲ್ಲಿ ಫಿತ್ನಗಳು ಶುರುವಾದಾಗ ಅವುಗಳನ್ನು ನಂದಿಸಲು ಸಹಾಬಿವರ್ಯರ ಪ್ರಯತ್ನಗಳ ಪ್ರಸ್ತಾಪ ಮಾಡುತ್ತಾ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹುರ ಬಳಿ ಒಟ್ಟುಗೂಡುವ ಅವಕಾಶವನ್ನು ಸಹಾಬಿವರ್ಯರಿಗೆ ನೀಡಲಾಗುತ್ತಿರಲಿಲ್ಲವಾದರೂ ಅವರು ತಮ್ಮ ಕರ್ತವ್ಯದಿಂದ ಅಜಾಗರೂಕರಾಗಿರಲಿಲ್ಲ. ಸಂದರ್ಭಕ್ಕೆ ಹೊಂದಿಕೊಂಡು ಅವರು ತಮ್ಮ ಕೆಲಸಗಳನ್ನು ಎರಡು ಭಾಗಗಳಲ್ಲಿ ವಿಂಗಡಿಸಿದ್ದರು. ಜನಸಾಮಾನ್ಯರ ಮೇಲೆ ತಮ್ಮ ಉತ್ತಮ ಸ್ವಭಾವದ ಪ್ರಭಾವವನ್ನು ಬೀರಬಲ್ಲವರಾದ ಹಿರಿವಯಸ್ಸಿನವರು ತಮ್ಮ ಸಮಯಗಳನ್ನು ಜನರಿಗೆ ತಿಳಿಹೇಳಲು ವಿನಿಯೋಗಿಸುತ್ತಿದ್ದರು. ಇಂತಹ ಪ್ರಭಾವವನ್ನು ಬೀರಲಾರದ ಯುವಕರು ಹಝ್ರತ್ ಉಸ್ಮಾನ್‌ರ(ರ) ಸಂರಕ್ಷಣೆ ಮಾಡುವ ಪ್ರಯತ್ನದಲ್ಲಿ ಮಗ್ನರಾಗುತ್ತಿದ್ದರು. ಮೊದಲಿನ ಸಂಘದವರಲ್ಲಿ ಹಝ್ರತ್ ಅಲಿ(ರ) ಮತ್ತು ಹಝ್ರತ್ ಸಅದ್ ಬಿನ್ ಅಬೀ ವಖಾಸ್(ರ)ರವರು ಪಿತೂರಿಯನ್ನು ಕಡಿಮೆ ಗೊಳಿಸಲು ಅತ್ಯಧಿಕವಾಗಿ ಪ್ರಯತ್ನಿಸುತ್ತಿದ್ದರು. ಹಝ್ರತ್ ಉಸ್ಮಾನ್‌ರ(ರ) ನಂತರ ಹಝ್ರತ್ ಅಲಿಯವರ ಖಿಲಾಫತ್ ಕಾಲದಲ್ಲೂ ಹಝ್ರತ್ ಸಅದ್(ರ) ವಿರಾಗಿಯಂತೆ ಜೀವನ ಸಾಗಿಸುತ್ತಿದ್ದರು. ಒಂದು ವರದಿ ಪ್ರಕಾರ ಹಝ್ರತ್ ಅಲಿ(ರ) ಮತ್ತು ಅಮೀರ್ ಮುಆವಿಯರ ನಡುವೆ ಭಿನ್ನಾಭಿಪ್ರಾಯಗಳು ವರ್ಧಿಸಿದಾಗ ಅಮೀರ್ ಮುಆವಿಯಾ ಮೂರು ಸಹಾಬಿವರ್ಯರಾದ ಹಝ್ರತ್ ಅಬ್ದುಲ್ಲಾಹ್ ಬಿನ್ ಉಮರ್(ರ), ಹಝ್ರತ್ ಸಅದ್ ಬಿನ್ ಅಬೀ ವಖಾಸ್(ರ), ಮತ್ತು ಹಝ್ರತ್ ಮುಹಮ್ಮದ್ ಬಿನ್ ಮಸ್ಲಿಮರಿಗೆ(ರ) ತನ್ನನ್ನು ಸಹಾಯ ಮಾಡಬೇಕೆಂದು ಪತ್ರ ಬರೆದಿದ್ದರು. ಹಝ್ರತ್ ಅಲಿಯವರಿಗೆ ಎದುರಾಗಿ ತನಗೆ ನೆರವು ನೀಡಬೇಕೆಂದು ಅವರು ಬರೆದಿದ್ದರು. ಆದರೆ ಅವರು ಮೂವರೂ ಅದನ್ನು ನಿರಾಕರಿಸಿದರು.

ಒಮ್ಮೆ ಹಝ್ರತ್ ಸಅದ್(ರ)ರೊಡನೆ ಅಮೀರ್ ಮುಆವಿಯಾ ಕೇಳಿದರು: ನೀವು ಹಝ್ರತ್ ಅಲಿ(ರ)ರವರನ್ನು ದೂಷಿಸದಿರಲು ಕಾರಣವೇನು? ಹಝ್ರತ್ ಸಅದ್(ರ) ಹೇಳಿದರು: ಹಝ್ರತ್ ಅಲಿಯವರ ಬಗ್ಗೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ ಮೂರು ಸಂಗತಿಗಳಲ್ಲಿ ಒಂದಾದರೂ ನನಗೆ ಲಭಿಸಿದ್ದರೆ ಅದು ನನಗೆ ಕೆಂಪು ಒಂಟೆಗಳಿಗಿಂತಲೂ ಪ್ರಿಯವಾಗುತ್ತಿತ್ತು. ಅದರಲ್ಲಿ ಒಂದು ಇದಾಗಿದೆ. ಒಂದು ಬಾರಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಯುದ್ಧಕ್ಕೆ ಹೋಗುವ ಸಂದರ್ಭದಲ್ಲಿ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರನ್ನು ಮದೀನದಲ್ಲಿ ತನ್ನ ಪ್ರತಿನಿಧಿಯನ್ನಾಗಿ ಮಾಡಿದರು. ಆಗ ಹಝ್ರತ್ ಅಲಿ(ರ) ಕೇಳಿದರು: ಯಾ ರಸೂಲುಲ್ಲಾಹ್, ನೀವು ನನ್ನನ್ನು ಸ್ತ್ರೀಯರು ಮತ್ತು ಮಕ್ಕಳ ನಡುವೆ ಬಿಟ್ಟು ಹೋಗುತ್ತಿರುವಿರಾ? ಆಗ ಹಝ್ರತ್ ಪೈಗಂಬರ್ ಸಲ್ಲಲಾಹು ಅಲೈಹಿ ವಸಲ್ಲಮರು ಹೇಳಿದರು: ಹಾರೂನ್ ಅಲೈಹಿಸ್ಸಲಾಮರಿಗೆ ಮೂಸಾ ಅಲೈಹಿಸ್ಸಲಾಮರೊಡನೆ ಇದ್ದ ಅದೇ ಸಂಬಂಧ ನಿನಗೆ ನನ್ನೊಂದಿಗೆ ಇದೆ ಎಂಬ ಸಂಗತಿಯಿಂದ ನಿನಗೆ ಸಂತೋಷವಿಲ್ಲವೇ? ನನ್ನ ಬಳಿಕ ನಿನಗೆ ಪ್ರವಾದಿತ್ವದ ಪದವಿಯಿಲ್ಲ ಎಂಬ ವ್ಯತ್ಯಾಸ ಮಾತ್ರವಿದೆ. ಎರಡನೇ ಸಂಗತಿಯೇನೆಂದರೆ, ಖೈಬರ್ ಯುದ್ಧದ ವೇಳೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಂದು ಸಂದರ್ಭದಲ್ಲಿ ಹೇಳಿದರು: ಯಾರು ಅಲ್ಲಾಹನು ಮತ್ತು ಅವನ ಪ್ರವಾದಿಯನ್ನು ಪ್ರೀತಿಸುತ್ತಾನೋ ಮತ್ತು ಯಾರನ್ನು ಅಲ್ಲಾಹನು ಮತ್ತು ಅವನ ಪ್ರವಾದಿ ಪ್ರೀತಿಸುತ್ತಾರೋ ಅಂತಹ ವ್ಯಕ್ತಿಗೆ ನಾನು ಇಸ್ಲಾಮಿನ ಧ್ವಜವನ್ನು ಕೊಡುವೆನು. ಹೀಗೆ ಹೇಳಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರಿಗೆ ಇಸ್ಲಾಮಿನ ಬಾವುಟವನ್ನು ನೀಡಿದರು. ಅಲ್ಲಾಹನು ಆ ದಿನ ಮುಸ್ಲಿಮರಿಗೆ ವಿಜಯ ನೀಡಿದನು.

ಮೂರನೇ ಸಂಗತಿಯೇನೆಂದರೆ,

فَقُلْ تَعَالَوْا نَدْعُ اَبْنَآءَنَا وَاَبْنَآءَكُمْ وَنِسَآءَنَا وَنِسَآءَكُمْ

**ಫಖುಲ್‌ತಆಲೌ ನದ್‌ಉ ಅಬ್‌ನಾಅನಾ ವ ಅಬ್‌ನಾಅಕುಮ್ ವ ನಿಸಾಅನಾ ವ ನಿಸಾಅಕುಮ್.**

ಎಂದರೆ, ಹೇಳು: 'ಬನ್ನಿರಿ, ನಮ್ಮ ಸಂತಾನಗಳನ್ನೂ ನಿಮ್ಮ ಸಂತಾನಗಳನ್ನೂ ನಮ್ಮ ಸ್ತ್ರೀಯರನ್ನೂ ನಿಮ್ಮ ಸ್ತ್ರೀಯರನ್ನೂ ಕರೆಯೋಣ' ಎಂಬ ಆಯತ್ ಅವತೀರ್ಣವಾದಾಗ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಲಿ(ರ), ಹಝ್ರತ್ ಫಾತಿಮ(ರ), ಹಝ್ರತ್ ಹಸನ್ ಮತ್ತು ಹಝ್ರತ್ ಹುಸೈನ್‌ರನ್ನು ಕರೆದು ಹೀಗೆ ಹೇಳಿದರು: ಓ ಅಲ್ಲಾಹ್, ಇದು ನನ್ನ ಕುಟುಂಬವಾಗಿದೆ.

ಹಝ್ರತ್ ಸಅದ್ ಬಿನ್ ಅಬೀ ವಖಾಸರ ಮಗನಾದ ಮುಸ್‌ಅಬ್ ಬಿನ್ ಸಅದ್ ಹೇಳುತ್ತಾರೆ: ನನ್ನ ತಂದೆಯ ಮರಣದ ಸಮಯದಲ್ಲಿ ಅವರ ತಲೆ ನನ್ನ ಮಡಿಲಲ್ಲಿತ್ತು. ನನಗೆ ಕಣ್ಣೀರು ಉಕ್ಕಿಬಂತು. ಅವರು ನನ್ನನ್ನು ನೋಡಿದರು. ಎಲೈ ನನ್ನ ಪ್ರಿಯ ಪುತ್ರಾ, ನೀನೇಕೆ ಅಳುತ್ತಿದ್ದೀಯಾ? ನಾನು ಹೇಳಿದೆ, ನಿಮ್ಮ ಮರಣದ ದುಃಖದಿಂದ ಮತ್ತು ನಿಮ್ಮ ನಂತರ ನಿಮಗೆ ಸರಿಸಾಟಿಯಾಗಿ ನಾನು ಯಾರನ್ನು ಕಾಣುವುದಿಲ್ಲ ಎಂಬ ದುಃಖದಿಂದ ಅಳುತ್ತಿದ್ದೇನೆ. ಆಗ ಹಝ್ರತ್ ಸಅದ್(ರ) ಹೇಳಿದರು, ನನ್ನ ಬಗ್ಗೆ ಚಿಂತಿಸಿ ನೀನು ಅಳಬೇಡ. ಅಲ್ಲಾಹನು ನನಗೆ ಎಂದಿಗೂ ಶಿಕ್ಷೆ ನೀಡಲಿಕ್ಕಿಲ್ಲ. ನಾನು ಸ್ವರ್ಗವಾಸಿಯವರಲ್ಲಿ ಸೇರಿದವನಾಗಿರುವೆನು ಎಂದು ಹೇಳಿದರು.

ಹಝ್ರತ್ ಸಅದ್ ಬಿನ್ ಅಬೀ ವಖಾಸ್(ರ) ಹಿಜರೀ 55ಕ್ಕೆ ನಿಧನರಾದರು. ಮರಣದ ಸಮಯದಲ್ಲಿ ಅವರಿಗೆ ಎಪ್ಪತ್ತಕ್ಕಿಂತ ಸ್ವಲ್ಪ ಹೆಚ್ಚಿನ ವಯಸ್ಸಿತ್ತು. ಅವರ ಜನಾಝವನ್ನು ಆ ಕಾಲದಲ್ಲಿ ಮದೀನದ ಆಡಳಿತಗಾರನಾಗಿದ್ದ ಮರ್ವಾನ್ ಬಿನ್ ಹಕಮ್ ನಿರ್ವಹಿಸಿದರು. ಅವರ ಜನಾಝ ನಮಾಝಿನಲ್ಲಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪರಿಶುದ್ಧ ಪತ್ನಿಯಂದಿರು ಸಹ ಭಾಗವಹಿಸಿದ್ದರು. ಅವರನ್ನು ಜನ್ನತುಲ್ ಬಖೀನಲ್ಲಿ ದಫನ್ ಮಾಡಲಾಯಿತು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪರಿಶುದ್ಧ ಪತ್ನಿಯಂದಿರ ಆದೇಶ ಪ್ರಕಾರ ಅವರ ಜನಾಝವನ್ನು ಮಸೀದಿಯೊಳಗೆ ಇರಿಸಿದ್ದಕ್ಕಾಗಿ ಕೆಲವರು ಆಕ್ಷೇಪಿಸಿದ್ದರು. ಅದನ್ನು ಕೇಳಿ ಹಝ್ರತ್ ಆಯಿಶಾ(ರ) ಹೇಳಿದರು: ಜನಾಝವನ್ನು ಮಸೀದಿಯೊಳಗೆ ತರಲಾಗಿದೆ ಎಂಬುದಕ್ಕೆ ನಮ್ಮ ಮೇಲೆ ಯಾಕೆ ಆರೋಪ ಹೊರಿಸಲಾಗುತ್ತಿದೆ? ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸುಹೈಲ್ ಬಿನ್ ಬೈಝಾರ ಜನಾಝ ನಮಾಝ್ ಮಸೀದಿಯೊಳಗೆ ನಿರ್ವಹಿಸಿದ್ದರು.

ಹಝ್ರತ್ ಸಅದ್(ರ) ವಿವಿಧ ಸಮಯಗಳಲ್ಲಿ ಒಟ್ಟು ಒಂಬತ್ತು ವಿವಾಹವಾಗಿದ್ದರು. ಅಲ್ಲಾಹನು ಅವರಿಂದ 34 ಮಕ್ಕಳನ್ನು ಅವರಿಗೆ ದಯಪಾಲಿಸಿದನು. ಅವರಲ್ಲಿ 17 ಹೆಣ್ಮಕ್ಕಳು ಮತ್ತು 17 ಗಂಡು ಮಕ್ಕಳಿದ್ದರು.

(ಖುತ್‌ಬದ ಕೊನೆಗೆ ಹುಝೂರ್, ದಿವಂಗತ ಸಫ್‌ದರ್ ಅಲಿ ಗುಜ್ಜರ್ ಸಾಹಿಬ್, ಇಫ್ಫತ್ ನಸೀರ್ ಸಾಹಿಬ, ಅಬ್ದುರ್ರಹೀಮ್ ಸಾಖಿ ಸಾಹಿಬ್ ಮತ್ತು ದಿವಂಗತ ಸಈದ್ ಅಹ್ಮದ್ ಸೆಹ್ಗಲ್ ಸಾಹಿಬರ ಸ್ವಭಾವ ವೈಶಿಷ್ಟ್ಯಗಳನ್ನು ವಿವರಿಸಿದರು. ಜುಮುಅ ನಮಾಝಿನ ನಂತರ ಅವರೆಲ್ಲರ ಜನಾಝ ನಮಾಝನ್ನು ನಿರ್ವಹಿಸಿದರು.)

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ

مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ

فَلَاهَادِىَ لَهٗ ، وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ

عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى

وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ

يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis(atba)***

*At, Masjid Mubarak, Islamabad, Tilford, UK, On 14-08-2020*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**: khutuba.kannada@gmail.com*

**You can find all the Sermons archived at**: www.alislam.org/friday-sermon